# ಸುನೀತ ಸಮಯ




## ಕೆ.ವೈ. ನಾರಾಯಣ ಸ್ವಾಮಿ

ಕಲೆ: ಎಸ್‌ವಿ. ಹೂಗಾರ್



### 1

ಯಾರೆ ಸಖಿ ನೀನಾರೆ ಸಖಿ ಯಾರಿಗೆ ಕಾದಿರುವೆ ಇಂದುಮುಖಿ
ಯಾರಿಗಾಗಿ ನೊಂದಿರುವೆ ಯಾರಿಗಾಗಿ ಬೆಂದಿರುವೆ||
ಗಳಿಗೆ ಗಳಿಗೆ ಒಂದು ಸರತಿ ಕಣ್ಣ ದೀಪವು ಅಲುಗುತಿರುವುದೇಕೆ
ಹೆಜ್ಜೆಗೆ ಒಂದು ಸರತಿ ಉಸಿರ ಭಾರಕೆ ಕುಸಿಯುತಿರುವುದೇಕೆ
ಗಾಳಿಗಲುಗಿದರೆ ಚಿಲಕ ಮಳೆ ಹನಿ ಭೂಮಿಗಿಳಿದಂತೆ ಪುಳಕ
ತಿದಿಯೊತ್ತಿದಂತೆ ಮನವು ಬೆಂದಂತೆ ಮೈಯಿ ಬೆವರ ಜಳಕ||ಯಾ||
ಚಂದಿರನ ಬಿಂಬ ಕನ್ನಡಿಯ ತುಂಬ ಕಳೆಗುಂದಿರುವುದೇಕೆ
ಕತ್ತಲಿನ ಹಾದಿ ಕಡಲಿನಲಿ ನಾವೆ ಮುಗಿದಿಲ್ಲ ಪಯಣವೇಕೆ
ತಲ್ಲಣಿಸಿ ತ್ರಾಣ ಚಡಪಡಿಸಿ ಪ್ರಾಣ ತಡಬಡಿಸುತಿರುವೇಕೆ
ತುಂಬಿರುವ ಕೊಳವು ತುಳುಕಿರುವ ಕ್ಷಣವು ಮಂಜಾಯ್ತು ನೋಟವೇಕೆ?||ಯಾ||
ಬರುತಿಹನು ಇತ್ತ ನುಡಿದಿಹದು ಚಿತ್ತ ಮೈಗಂಧ ತೋರಿ ಹಾದಿ
ಕರಗಿಹದು ದುಃಖ ನೆರಳಿಹದು ಪಕ್ಕ ನವಿಲಗರಿ ಕಣ್ಣ ಬೀದಿ
ಕದತೆರೆಯಲೇನು ಎವೆ ಬಡಿಸಲೇನು ನಿಜವೇನು ನಿಂತ ಭಂಗಿ
ಹಂಬಲವು ಕರಗಿ ಬೆಂಬಲವು ಮರುಗಿ ಗುಯಿಗುಟ್ಟುತಿಹದು ಗುಂಗಿ||



### 2

ಕಣ್ಣ ಪಕ್ಷಿಗಳೇ ಹಾರು ನೋಡದರಿ
ಬರಿದೇ ಬರಿದು ಇನಿಯ ಬರುವ ಬೀದಿ||
ಬೆಲ್ಲದಂತ ಸವಿನಯ ಮಾತನಾಡಿದರು ಸರಿ
ನಂಬಲಾರೆನು ನಿನ್ನ ಎಂದೂ ಕೇಳು ಮುರಾರಿ
ಬರುವೆನೆಂದು ಬರದೆ ಆಣೆ ಕೊಂದೆ ಅನ್ಯಾಯಕಾರಿ
ತಾಳಲಾರೆನಹಾ... ವಿರಹ ಸುಡುವುದು ಈ ಪರಿ||
ಸಿಂಗಾರಗೊಂಡಿದೆ ನೆಲ ಮುಂಗಾರ ಮಳೆಗೆ
ಮೋಡದೊಳ ಮಿಂಚು, ಮಸೆಯುವುದು ನಾಗರ ನಾಲಿಗೆ
ಎದೆ ಬಡಿತದಂತಿಹದು ಕದ ಬಡಿಯುವ ಸದ್ದು
ಕಾಯಿಸುವೆನು ಅವನ ನಟಿಸಿ ನಾ ನಿದ್ದೆಯನೊದ್ದು||
ಮನ ಕತ್ತಲಾಗಿಹುದು ಬೆಳಗದಿರಿ ಚುಕ್ಕಿಗಳೆ
ಅವ ಬರುವ ಭ್ರಾಂತಿಯನು ಹುಟ್ಟಿಸದಿರಿ ದಿಕ್ಕುಗಳೇ
ಗಾಸಿಗೊಂಡಿದೆ ದೇಹ ದಾಳಿ ಮಾಡದಿರಿ ಹೂವುಗಳೇ
ಪ್ರಾಣವಿತ್ತಾ ಪ್ರೇಮಿಗಳ ಹುಸಿಕತೆಯ ಹೇಳದಿರಿ ದುಂಬಿಗಳೇ||